ಅ) ಹೌದು. ಮಿತವೇತನ ಪದವೀಧರರನ್ನು ಖಾಯಂಗೊಳಿಸಲು ಸರ್ಕಾರವು 1982ರಲ್ಲಿ ಕೆ.ಸಿ.ಎಸ್. (ವಿಶೇಷ) ನಿಯಮಗಳನ್ನು ಜಾರಿಗೆ ತರಲಾಗಿದೆ. ನಿಯಮಾನುಸಾರ ಖಾಲಿ ಹುದ್ದೆಗಳನ್ನು ಇಲಾಖೆಗಳಿಂದ ಬಂದ ಬೇಡಿಕೆಗಳಿಗನುಸಾರವಾಗಿ ತುಂಬಲಾಗುತ್ತಿದೆ.

ಆ) 103

ಇ)

1) ಇಲಾಖಾ ಮುಖ್ಯಸ್ಥರುಗಳಿಂದ ಖಾಲಿ ಹುದ್ದೆಗಳ ವಿವರಗಳನ್ನು ತಿಳಿಸಲು ಕೋರಲಾಗಿದೆ.

2) ವಯೋಮಿತಿ ಮೀರಿದವರ ಬಗ್ಗೆ ತಿದ್ದುಪಡಿ ತರಲು ತೀರ್ಮಾನಿಸಿದೆ.

3) ಆರ್ಥಿಕ ಮಿತವ್ಯಯ ಆದೇಶವನ್ನು ಸಡಿಲಗೊಳಿಸಲಾಗಿದೆ.

4) ಎಲ್ಲಾ ಇಲಾಖೆಗಳಿಂದ ಖಾಲಿ ಹುದ್ದೆಗಳ ವಿವರ ಬಂದಲ್ಲಿ ಪದವೀಧರರನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಬೇಲೂರು ಪಟ್ಟಣದ ಕುಡಿಯುವ ನೀರಿನ ಯೋಜನೆ ಬಗ್ಗೆ

1574 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರವಾದ ಬೇಲೂರು ಪಟ್ಟಣದ ಕುಡಿಯುವ ನೀರಿನ ಯೋಜನೆ ಮಂಜೂರಾತಿಯ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದೆಯೇ?

ಆ) ಬೇಲೂರು ಪಟ್ಟಣದಲ್ಲಿ ಕುಡಿಯುವ ನೀರಿನ ಬರ ತೀವ್ರವಾಗಿ ಎದುರಿಸುತ್ತಿರುವ ಈ ಸಂದರ್ಭದಲ್ಲಿ ಸರ್ಕಾರ ಮಂಜೂರಾತಿ ನೀಡುವಲ್ಲಿ ವಿಳಂಭವಾಗಲು ಕಾರಣವೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಇಲ್ಲ

ಆ) ಬೇಲೂರು ಪಟ್ಟಣಕ್ಕೆ ಶಾಶ್ವತವಾಗಿ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಲು ರೂ. 80 ಲಕ್ಷಗಳಿಗೆ ಅಭಿವೃದ್ಧಿ ಯೋಜನೆಯನ್ನು ಯಗಚಿ ಜಲಾಶಯವನ್ನು ಮೂಲವಾಗಿಟ್ಟುಕೊಂಡು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ತಯಾರಿಸಿದೆ. ಪ್ರಸ್ತಾವನೆಯು ಬಂದ ನಂತರ ಪರಿಶೀಲಿಸಲಾಗುವುದು.

ಬೀಡಿ ಕಾರ್ಮಿಕರ ಮಜೂರಿ ದರವನ್ನು ಹೆಚ್ಚಿಸುವುದು

1762 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬೀಡಿ ಕಾರ್ಮಿಕರ ಮಜೂರಿ ದರವನ್ನು ಹೆಚ್ಚಿಸಲಾಗಿದೆಯೇ;

ಆ) ಈ ಬಗ್ಗೆ ಸರ್ಕಾರ, ಮಾಲೀಕರು ಮತ್ತು ಬೀಡಿ ಕಾರ್ಮಿಕರ ಸಭೆ ಕರೆದು ಏನಾದರೂ ನಿರ್ಣಯ ಮಾಡಿದೆಯೇ;

ಇ) ದಕ್ಷಿಣ ಕನ್ನಡದಲ್ಲಿ ಬೀಡಿ ಕಾರ್ಮಿಕರು ಮಜೂರಿ ಹೆಚ್ಚಳ ಮತ್ತು ಇನ್ನಿತರ ಸವಲತ್ತುಗಳಿಗಾಗಿ 1991ರಲ್ಲಿ ಮುಷ್ಕರ ಹೂಡಿ ಸರ್ಕಾರವನ್ನು ಒತ್ತಾಯಿಸಿರುವರೇ;

ಈ) ಸರ್ಕಾರ ಬೀಡಿ ಕಾರ್ಮಿಕರಿಗೆ ಯಾವ ಯಾವ ಸವಲತ್ತುಗಳನ್ನು ಈಗ ಒದಗಿಸುತ್ತದೆ;

ಉ) ಈಗ ನಿಗದಿ ಮಾಡಿರುವ ಕೂಲಿ ಎಷ್ಟು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ಹೌದು.